ಮೈಸೂರ ಗೆಜೆಟ್ಟು

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ, ನವಂಬರ್ ತಾ|| 19, ಸ್ರ್ 1887.

ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಜೀಲ್ಲಾ ಜಡ್ಜ್ಗಿರು, ವಗ್ಯೆರೇರಿಂದ ಕೊಡೋಷಾದ ಇಸ್ತಿಹಾರ್ನಾಮೆಗಳು.

ಫೈನ್ಯಾಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡ್ನನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡ್ನನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನ್‌ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡ್ನನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಕ್ಷೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಜಿ ರುಜೂ ಮಾಡಿರುವವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಹ್ಯೂಪ್ಟ್ಕೇಟೂದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಷೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲ್ಕೂದು.

ಹೆಚ್. ಹಡಿರ್ಸ್,
ಕಾಂಪ್ಟ್ರೋಲರ್.

ಫಾರೆಸ್ಟ್ಸ್ ಇಲಾಖಾ.

ತಾರೀಖು 3ನೇ ಅಕ್ಟೋಬರ್ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ದೇಶದಲ್ಲಿ ವುತ್ಪತ್ತಿಯಾದ ಗಂಧದ ಸಾಲೀಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಜಾಗಾಗಳಲ್ಲಿ ಅವುಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರವರು ವ ಫಾರೆಸ್ಟ್ ಆಫೀಸರುಗಳಿಂದ ನಡಿಸಲ್ಪಡುವವು.